# ಪದಬಂಧ




**ಎಡದಿಂದ ಬಲಕ್ಕೆ**

1. ಸಾಧ್ಯವಾದಷ್ಟೂ ಆತನೊಡನೆ ಒಳ್ಳೆಯ ನಡವಳಿಕೆಯೇ ಇರಲಿ 4
3. ತಾರೀಕಿನ ಲೆಕ್ಕ ಏನಿಲ್ಲ, ನಿತ್ಯವೂ ಇರುವ ಮೂರು ಸಮಯ 3
4. ರಾಕ್ಷಸರಂತಹ ಜನರಿಂದ ಕಾಪಾಡು 3
6. ಹರಿಗೋಲಿನಲ್ಲಿ ಕುಳಿತು ನದಿಯನ್ನು ದಾಟುವಾಗ ಪ್ರಸಿದ್ಧ ಕುರುಕಲು ತಿಂಡಿ 4
7. ಅಂಧನೇ ಆಗಿದ್ದರೂ ಆ ಮನುಷ್ಯ ಬಹಳ ನೀಚ 3
9. ಪುಣ್ಯದ ಕೆಲಸವೆಂದರೆ ಸಿಹಿ ಪಾನೀಯ ಹಂಚುವುದೇ? 3
11. ವಿತ್ತಕ್ಕಿರುವ ಮಹತ್ವವನ್ನು ಕಾವ್ಯ ರೂಪದಲ್ಲಿ ಹೇಳಬಲ್ಲ ಸಾಮರ್ಥ್ಯ 3
13. ಕೆಟ್ಟ ವಸ್ತುಗಳನ್ನೆಲ್ಲ ಹೊರಕ್ಕೆ ಕಳುಹಲು ಒಂದು ಪುಟ್ಟ ಬಾಗಿಲು 3
15. ಅಭಿಮನ್ಯುವನ್ನು ನೆನೆದರೇ ಉಕ್ಕುತ್ತದೆ ಹೆಮ್ಮೆ, ಗೌರವ 4
17. ತಾಳು, ತಾಳು. ಆಕೆಯದು ನಮ್ಮ ನೆರೆ ರಾಜ್ಯದ ಭಾಷೆ 3
18. ಕಾಟವೇನಿಲ್ಲದಿದ್ದರೂ ಅವನ ಆಲೋಚನೆಗಳಲ್ಲೆಲ್ಲ ಬರೀ ಮೋಸ, ವಂಚನೆ 3
19. ಕತ್ತಲಿನ ವ್ಯವಹಾರಗಳನ್ನು ತಿಳಿಯಲು ಏಕಿಂತಹ ಆಸಕ್ತಿ? 4

**ಮೇಲಿನಿಂದ ಕೆಳಕ್ಕೆ**

1. ಮೇವು ಹುಲುಸಾಗಿ ಬೆಳೆದಿದೆ; ಚೆನ್ನಾಗಿ ಪೋಷಿಸು, ಕಾಪಾಡು 3
2. ನೇರಳೆ ವೃಕ್ಷದ ಕೆಳಗೆ ಅದರದೇ ಛಾಯೆ 3
3. ವಿಧ ವಿಧ ಎಂದರೂ ಬಹಳ ಏನಿಲ್ಲ; ಮೂರೇ ಬಗೆ 3
5. ಮನಸನ್ನು ಉಲ್ಲಾಸಗೊಳಿಸಿದ್ದು ಇದೇ ಸುಂದರ ಹೂವು 3
7. ಅಕ್ಕನ ಸಾಧನೆಗಳು ಹಲವಾರು 3
8. ಆನೆಗಳನ್ನು ಪಳಗಿಸುವಲ್ಲಿ ಮಾಹುತರದೇ ಭಾರೀ ಪ್ರಾಮುಖ್ಯ 3
9. ಪಾರ್ವತಿಕ್ಕ ಮಾಡಿದ್ದು ಮಹಾ ಪಾಪದ ಕೃತ್ಯ 3
10. ಎಂಥ ಕಠಾರಿಯಿಂದಲೂ ಮುರಿಯಲಾರದಂತಹ ಚಿಪ್ಪು 3
12. ವಿನಯವಂತನನ್ನು ಕುಗ್ಗಿಸಿದರೂ ಉಳಿಯುವುದು ಅದೇ ಸ್ವಭಾವ 3
14. ತುಂಬ ಚಾಲಾಕಿಯಾಗಿರುವ ಆತ ವಿಪರೀತ ಮಾತುಗಾರ ಕೂಡ 3
15. ಆಳು ಕಾಳು ನೇಮಿಸಿಕೊಳ್ಳಲು ಭಾರೀ ಹಿಂಜರಿತ 3
16. ವ್ಯಕುಲನಾಗಿದ್ದಾನೇಕೆ ಈ ಪಾಂಡವ? 3

---

## 12—09—2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸದುಪಾಯ 3. ವ್ಯಾಮೋಹ 4. ಶಯನ 6. ಸಡಗರ 8. ಗುಸುಗುಸು 10. ಕೆಡುನುಡಿ 12. ರಮಣೀಯ 16. ಪುಳಕ 17. ರೋಚಕ 18. ರಣರಂಪ

**ಮೇಲಿನಿಂದ ಕೆಳಕ್ಕೆ**

1. ಸಹಸ್ರ 2. ಯಶಸ್ಸು 3. ವ್ಯಾಸಂಗ 5. ನಪಾಸು 6. ಸಜ್ಜನಿಕೆ 7. ರಮ್ಯಗುಡಿ 8. ಗುರುತರ 9. ಸುರಪ್ರಿಯ 11. ನುಣುಪು 13. ಮರುಕ 14. ಮಕರ 15. ಆರೋಪ

ಪ್ರಶ್ನಾಂಕಣ

# ಹೋಮೊ ಇರೆಕ್ಟಸ್: ಏನು ವಿಶೇಷ?

ಹೋಮೊ ಇರೆಕ್ಟಸ್ (Homo erectus: ಚಿತ್ರ1). ಪೂರ್ವ ಮಾನವರ ಹತ್ತಾರು ಪ್ರಭೇದಗಳಲ್ಲಿ (ಚಿತ್ರಗಳಲ್ಲಿ ಗಮನಿಸಿ) ಹೋಮೊ ಇರೆಕ್ಟಸ್ ಒಂದು ಪ್ರಧಾನ ಪ್ರಭೇದ. ಈ ಪ್ರಭೇದಕ್ಕೇ ಹೋಮೊ ಎರ್ಗಾಸ್ಟರ್ ಎಂಬ ಹೆಸರೂ ಅಪರೂಪವಾಗಿ ಬಳಕೆಯಲ್ಲಿದೆ. ಆಫ್ರಿಕಾ ಖಂಡದಿಂದ ಹೊರಗಡೆಯೂ ಹರಡಿದ್ದ, ನೆಲೆಸಿದ್ದ ಪ್ರಪ್ರಥಮ ಪೂರ್ವ ಮಾನವ ಪ್ರಭೇದ ಎಂಬುದು ಹೋಮೊ ಇರೆಕ್ಟಸ್‌ನ ಪ್ರಥಮ ವಿಶೇಷ.

ಹೋಮೊ ಇರೆಕ್ಟಸ್‌ನ ಮೊತ್ತ ಮೊದಲ ಪಳೆಯುಳಿಕೆ ಪತ್ತೆಯಾದದ್ದು ಇಂಡೊನೇಷಿಯಾದಲ್ಲಿ, 1891ರಲ್ಲಿ. 1894ರಲ್ಲಿ ಈ ಪ್ರಭೇದಕ್ಕೆ ಪಿಥಿಕಾಂಥ್ರೋಪಸ್ ಇರೆಕ್ಟಸ್ (ನೇರ ನಿಲುವಿನ ಮಂಗ ಮಾನವ) ಎಂದು ಹೆಸರಿಸಲಾಯಿತು. ಅನತಿ ಕಾಲದಲ್ಲೇ ಆ ಹೆಸರನ್ನು ಹೋಮೊ ಇರೆಕ್ಟಸ್ ಎಂದು ಬದಲಿಸಲಾಯಿತು. ಆ ಕಾಲದಲ್ಲಿ ಆಫ್ರಿಕಾದಲ್ಲಿ ಇನ್ನೂ ಯಾವ ಪೂರ್ವ ಮಾನವ ಪಳೆಯುಳಿಕೆಗಳೂ ಪತ್ತೆಯಾಗಿರಲಿಲ್ಲ.

ಆಧುನಿಕ ಮಾನವರ, ಎಂದರೆ ಹೋಮೊ ಸೇಪಿಯನ್‌ಗಳನ್ನೇ ಹೋಲುವ ಶರೀರ ಲಕ್ಷಣಗಳ, ಅಳತೆಗಳ ಅಂಗಾಂಗಗಳನ್ನೇ ಹೊಂದಿದ್ದದ್ದು ಹೋಮೊ ಇರೆಕ್ಟಸ್‌ಗಳ ಮತ್ತೊಂದು ವಿಶೇಷ. ವೃಕ್ಷ ವಾಸವನ್ನು ಸಂಪೂರ್ಣ ಕೈಬಿಟ್ಟು ನೆಲವಾಸಕ್ಕೆ ಯೋಗ್ಯವಾಗಿದ್ದ, ಎಂದರೆ ಎಷ್ಟೇ ದೂರಗಳನ್ನಾದರೂ ನಡೆಯಬಲ್ಲ ಮತ್ತು ಓಡಬಲ್ಲ ಸಾಮರ್ಥ್ಯಗಳನ್ನು ಒದಗಿಸಿದ್ದ ಶರೀರ ವಿನ್ಯಾಸ ಅವುಗಳದು. ಹೋಮೊ ಇರೆಕ್ಟಸ್ ಧರೆಯಲ್ಲಿ ನೆಲೆಸಿದ್ದ ಕಾಲಾವಧಿ ತುಂಬ ಸುದೀರ್ಘ: ಸುಮಾರು 20 ದಶಲಕ್ಷ ವರ್ಷ ಹಿಂದಿನಿಂದ ಒಂದೇ ಲಕ್ಷ ವರ್ಷ ಹಿಂದಿನವರೆಗೆ. ಈ ಪೂರ್ವ ಮಾನವರದು ಐದರಿಂದ ಆರು ಅಡಿವರೆಗೆ ವಿವಿಧ ಎತ್ತರ; 40ರಿಂದ 60 ಕಿಲೋ ಗ್ರಾಂ ತೂಕ. ಆಫ್ರಿಕಾ ಖಂಡದ ಉತ್ತರ, ಪೂರ್ವ ಮತ್ತು ದಕ್ಷಿಣದ ಪ್ರದೇಶಗಳಲ್ಲಿ ಹಾಗೂ ಪಶ್ಚಿಮ ಏಷ್ಯಾ ಮತ್ತು ಪೂರ್ವ ಏಷ್ಯಾದ ಚೀನಾ ಮತ್ತು ಇಂಡೊನೇಷಿಯಾ ಪ್ರದೇಶಗಳಲ್ಲಿ ಈ ಪೂರ್ವ ಮಾನವರು ನೆಲೆಸಿದ್ದರು.

ಮತ್ತೊಂದು ವಿಶೇಷ ಏನೆಂದರೆ, ಈ ಪೂರ್ವ ಮಾನವರು ಅವರ ಆರಂಭಿಕ ಕಾಲದಲ್ಲಿ, ಎಂದರೆ 1.9 ದಶಲಕ್ಷ ವರ್ಷ ಹಿಂದೆ, ಆಫ್ರಿಕಾದಲ್ಲಿ ಅವರಿಗೂ ಹಿಂದಿನ ಕಾಲದ ಪೂರ್ವ ಮಾನವ ಪ್ರಭೇದಗಳಾದ ಹೋಮೊ ರುಡೋಲ್ಫೆನ್ಸಿಸ್, ಹೋಮೊ ಹ್ಯಾಬಿಲಿಸ್, ಪರಾಂಥ್ರೋಪಸ್ ಬೋಯ್ಸಿಯಾಯ್ ಇತ್ಯಾದಿಗಳ ಸಮಕಾಲೀನರಾಗಿದ್ದುವು. ಅದೇ ಹೋಮೊ ಇರೆಕ್ಟಸ್ ಪ್ರಭೇದ ಅದರ ಅಂತ್ಯದ, 1.1 ಲಕ್ಷ ವರ್ಷ ಹಿಂದಿನ ಸುಮಾರಿನಲ್ಲಿ ಹೋಮೊ ಫ್ಲಾರೆಸಿಯೆನ್ಸಿಸ್ ಮತ್ತು ಹೋಮೊ ಸೇಪಿಯೆನ್ಸ್ ಪ್ರಭೇದಗಳ ಜೊತೆ ಬದುಕಿದ್ದವು!




ಮಾನವ ಶಾಸ್ತ್ರಜ್ಞರ ಪ್ರಕಾರ ಹೋಮೊ ಇರೆಕ್ಟಸ್ ಪ್ರಭೇದ ಅವತರಿಸಿದ್ದು ಅದಕ್ಕೂ ಪೂರ್ವದ ಹೋಮೊ ಹ್ಯಾಬಿಲಿಸ್ ಪ್ರಭೇದದಿಂದ. ಹಾಗೆಯೇ ನಮ್ಮ ಪ್ರಭೇದ ಹೋಮೊ ಸೇಪಿಯೆನ್ಸ್‌ನ ಅವತರಣಕ್ಕೆ ಹೋಮೊ ಇರೆಕ್ಟಸ್ ಪ್ರಭೇದವೇ ಕಾರಣ. ಹೋಮೊ ಇರೆಕ್ಟಸ್ ಪ್ರಭೇದದ ಪರಮ ವೈಶಿಷ್ಟ್ಯ ಇದೇ.

■ ಎನ್. ವಾಸುದೇವ್